ಈ) ಹಾಗಿದ್ದಲ್ಲಿ ಈ ಮಹಿಳಾ ವಿಶೇಷ ಬಸ್ಸನ್ನು ತೆಗೆದುಹಾಕಲು ಕಾರಣಗಳೇನು?

ಉ) ಈ ಮಹಿಳಾ ವಿಶೇಷ ಬಸ್ ಸೌಲಭ್ಯವನ್ನು ಪುನರಾರಂಭಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಪ್ರತಿನಿತ್ಯ ನಾಲ್ಕು ಬಸ್ಸುಗಳನ್ನು ೧೯೩೦, ೧೯೩೫, ೧೯೪೦ ಮತ್ತು ೧೯೪೫ಕ್ಕೆ ಒಡಿಸಲಾಗುತ್ತಿದೆ.

ಆ) ಇಲ್ಲ

ಇ) ಇತ್ತು

ಈ) ಈ ಮಹಿಳಾ ವಿಶೇಷ ಬಸ್ಸನ್ನು ಬಹಳ ದಿವಸಗಳವರೆಗೆ ಪ್ರಾಯೋಗಿಕವಾಗಿ ಓಡಿಸಲಾಗಿ ಮಹಿಳೆಯರಿಂದ ಹೆಚ್ಚಿನ ಉತ್ತೇಜನ ಕಂಡುಬರಲಿಲ್ಲವಾದ್ದರಿಂದ ಸದರಿ ಮಹಿಳಾ ಬಸ್ಸನ್ನು ಸಾರ್ವಜನಿಕ ಬಸ್ಸನ್ನಾಗಿ ಪರಿವರ್ತಿಸಲಾಯಿತು.

ಉ) ಸಾಕಷ್ಟು ಮಹಿಳಾ ಪ್ರಯಾಣಿಕರಿಂದ ಬೇಡಿಕೆ ಬಂದಲ್ಲಿ ಪರಿಶೀಲಿಸಲಾಗುವುದು.

## ವರದಿಯನ್ನು ಒಪ್ಪಿಸುವುದು

ಶ್ರೀ ಬಿ.ಆರ್. ಯಾವಗಲ್ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎಂಟನೇ ವರದಿಯನ್ನೊಪ್ಪಿಸುತ್ತಿದ್ದೇನೆ.

ಶ್ರೀ ಎಂ ಎಲ್. ಉಸ್ತಾದ್ (ಮಾನ್ಯ ಬಾಬುರೆಡ್ಡಿ ತುಂಗಳ್‌ರವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಈ ವರದಿಯನ್ನು ಒಪ್ಪಬಹುದೆಂದು ಭಾವಿಸುತ್ತೇನೆ,

ಅಧ್ಯಕ್ಷರು.—ವರದಿಯನ್ನೊಪ್ಪಿಸಲಾಯಿತು,—ಈಗ ಗವನ ಸೆಳೆಯುವ ಸೂಚನೆ..

ಶ್ರೀ ಆರ್. ವೆಂಕಟ ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಇವತ್ತು ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳೋಣವೆಂದು ತಾವು ನಿನ್ನೆಯದಿವಸ ಹೇಳಿದ್ದೀರಿ...

ಅಧ್ಯಕ್ಷರು.—ಮೊದಲು ಕಾಲಿಂಗ್ ಅಟೆನ್‌ಷನ್‌ನ್ನು ಮುಗಿಸಿ ನಂತರ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳೋಣ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಇವತ್ತು ಹಕ್ಕುಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳುತ್ತೀರೆಂದು ಹೇಳಿದ್ದೀರಿ ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು.—ಗವನ ಸೆಳೆಯುವ ಸೂಚನೆಯನ್ನು ಮುಗಿಸಿ ನಂತರ ತೆಗೆದುಕೊಳ್ಳೋಣ.

ಶ್ರೀ ಎಂ.ಎಸ್. ಕೃಷ್ಣನ್.—ಆ ರೀತಿ ಮಾಡಲು ಆಗುವುದಿಲ್ಲ. ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ಮೊದಲು ಹಕ್ಕು ಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಮೊದಲು ಗವನ ಸೆಳೆಯುವ ಸೂಚನೆ ಆಗಲಿ, ನಂತರ ತೆಗೆದುಕೊಳ್ಳೋಣ.

ಶ್ರೀ ಎಂ.ಎಸ್. ಕೃಷ್ಣನ್.— ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ತಾವು ಆ ರೀತಿ ಮಾಡಲು ಆಗುವುದಿಲ್ಲ

ಅಧ್ಯಕ್ಷರು.—ಅವರು ಒಪ್ಪಿಕೊಂಡಿದ್ದಾರೆ. ನೀವು ಒಪ್ಪಿಕೊಂಡಿದ್ದೀರಿ, ಅಜೆಂಡದಲ್ಲಿ ಅತೀ ವೈಷ್ಟಿ ಮುಂತಾದ ಮಹತ್ವದ ವಿಚಾರಗಳಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹೇಳಿದ್ದನ್ನು ನಾವು ಕೇಳಿದ್ದೇವೆ, ನಾವು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದಾಗ ತಾವು ಚರ್ಚೆಗೆ ಅವಕಾಶ ಕೊಡುವುದಿಲ್ಲ ?

ಶ್ರೀ ಎಂ.ಎಸ್. ಕೃಷ್ಣನ್.—ನಾವು ಪ್ರಿವಿಲೇಜ್ ನೋಟೀಸ್ ಕೊಟ್ಟು ನಾಲ್ಕು ದಿವಸಗಳಾಯಿತು ನಾಲ್ಕು ದಿವಸಗಳಿಂದ ಹೇಳಿಕಳುಹಿಸುತ್ತಿದ್ದೇವೆ. ಅವರು ಬರುತ್ತಿಲ್ಲ.